ಹುಲಿಮರಿಯ ತರಹೇವಾರಿ ಪ್ರಶ್ನೆಗಳಲ್ಲಿ ಒಂದಕ್ಕೂ ಉತ್ತರ ಕೊಡಲು ಸಾಧ್ಯವಾಗದ ಕಾಳಿಂಗಜ್ಜ ಥರಥರನೇ ನಡುಗುತ್ತಿದ್ದ. ಗುಡಿಸಲಿನ ಬಾಗಿಲು ಮುಚ್ಚಿದ್ದರೂ, ಅದರಾಚೆ ತನ್ನ ಎದುರಿಗೇ ನಿಂತಿದ್ದ ಅದು ಕೋರ್ಟಿನಲ್ಲಿ ಅಪರಾಧಿಗೆ ಕ್ರಾಸ್ ಕ್ವಶ್ಚನ್ ಹಾಕುವ ವಕೀಲರ ಹಾಗೆ ಒಂದಾದ ಮೇಲೊಂದರಂತೆ ತರ್ಕಬದ್ಧ ಪ್ರಶ್ನೆಗಳನ್ನು ಎಸೆಯುತ್ತಲೇ ಇತ್ತು. ಎಲ್ಲಿ ತನ್ನ ಮೇಲದು ಎಗರಿಬಿಡುತ್ತದೆಯೋ ಅನ್ನುವ ಅಂಜಿಕೆ ಕಾಳಿಂಗಜ್ಜನಿಗೆ. ಆದರೆ, ಅವನ ಆ ಭಯವನ್ನು ದೂರಮಾಡುವಂತೆ ಹುಲಿಮರಿಯೇ ಕೊನೆಯ ಮಾತು ಹೇಳಿತು.

''ನೋಡು ಕಾಳಿಂಗಜ್ಜ, ನೀವೆಲ್ಲ ಭಾವಿಸಿರುವಂತೆ ನಾನು ಮೊದಲೇ ದುಷ್ಟವ್ಯಾಘ್ರನ ಮಗ. ನನಗೆ ಕೊಲ್ಲುವ ಸಾಮರ್ಥ್ಯವಿದ್ದರೂ ಖಂಡಿತ ನಾನು ನಿನ್ನನ್ನು ಕೊಲ್ಲುವುದಿಲ್ಲ. ಕಾಲಕ್ಕೆ ತಕ್ಕಂತೆ ಬಣ್ಣ ಬದಲಿಸುವ ನಿನ್ನಂಥ ಸ್ವಾರ್ಥಿ ಮನುಷ್ಯರನ್ನು ಕೊಂದು ನನಗೇನೂ ಆಗಬೇಕಿಲ್ಲ. ನಿಮಗೆ ಸತ್ತ ಹುಲಿಯ ಚರ್ಮವೂ ಬೇಕು, ಜೀವಂತ ಆಕಳಿನ ಹಾಲೂ ಬೇಕು. ಜೊತೆಗೆ ಆಕಳ ಮಾಂಸ–ಚರ್ಮಗಳೂ ಬೇಕು. ನನ್ನಂಥ ಯಃಕಶ್ಚಿತ್ ಪ್ರಾಣಿಯೊಂದು ಕೇಳಿದ ಪ್ರಶ್ನೆಗಳಲ್ಲಿ ಒಂದಕ್ಕೂ ಉತ್ತರ ಕೊಡುವ ಯೋಗ್ಯತೆ ಇಲ್ಲದ ನಿನ್ನಂಥ ಮನುಷ್ಯನ ಜೊತೆ ಮಾತಾಡಿ ಯಾವ ಪ್ರಯೋಜನವೂ ಇಲ್ಲ. ನೋಡು, ದಯವಿಟ್ಟು ನೀನೀಗ ಆಕಳ ದೊಡ್ಡಿಯ ಬಾಗಿಲು ತೆರೆದು ಒಳಗೆ ಹೋಗಲು ನನಗೆ ಅವಕಾಶ ಮಾಡಿಕೊಡು. ನಿನಗೆ ಪ್ರಮಾಣ ಮಾಡಿ ಹೇಳುತ್ತೇನೆ, ಕೇಳಿಸಿಕೋ; ಪ್ರಮಾಣ ಮಾಡಿ ಹೇಳುತ್ತೇನೆ; ನಾನು ಯಾವ ಆಕಳನ್ನೂ, ಆಕಳ ಕರುವನ್ನೂ ಕೊಲ್ಲುವುದಿರಲಿ, ಮುಟ್ಟುವುದೂ ಇಲ್ಲ. ನನಗೆ ಅಗತ್ಯ ಇರೋದು ಪುಣ್ಯಕೋಟಿಯ ಜೊತೆ ಮಾತಾಡೋದು ಮಾತ್ರ. ಆ ತುರ್ತು ಇರೋದ್ರಿಂದಾನೆ ಹಸಿವಿನಿಂದ ಸಾಯುತ್ತಿರುವ ಈ ಸ್ಥಿತಿಯಲ್ಲೂ ನಾನಿಲ್ಲಿಗೆ ಬಂದಿರೋದು. ಆ ಪ್ರಾಣಿಯೊಂದಿಗೆ ಮಾತಾಡಿ, ನನ್ನ ಪ್ರಶ್ನೆಗಳಿಗೆ ಸೂಕ್ತ ಉತ್ತರ ಪಡೆದ ಮರುಕ್ಷಣವೇ ನಾನಿಲ್ಲಿಂದ ಹೊರಟು ಹೋಗುವೆ. ಆಯ್ತೆ?''

ಹುಲಿಮರಿಯ ಮಾತುಗಳಲ್ಲಿದ್ದ ಪ್ರಾಮಾಣಿಕತೆ ಅರ್ಥವಾದರೂ ಕಾಳಿಂಗಜ್ಜನಿಗೆ ಒಳಗೊಳಗೇ ಭಯ! 'ಈಗ ಈ ರೀತಿ ಮಾತಾಡಿ, ಒಳಗೆ ಹೋದ ಮೇಲೆ ತನ್ನ ಆಕಳುಗಳ ಅಥವಾ ಸಣ್ಣ ಕರುಗಳ ಮೇಲೆ ಎಗರಿ ಬಿದ್ದರೇನು ಗತಿ? ಹಾಗೇನಾದರೂ ಆದರೆ ಅದು ಎಷ್ಟು ಆಕಳುಗಳನ್ನು ಕೊಂದು ಹಾಕುತ್ತದೆಯೋ!' ಎನ್ನುವ ಆತಂಕ ಅವನಿಗೆ. ಆದರೆ ಇನ್ನೂ ಹೆಚ್ಚು ಹೊತ್ತು ಕಳೆದರೆ ಮುಂದೆ ತನಗೆ ಒದಗಬಹುದಾದ ಅಪಾಯದ ಅರಿವೂ ಅವನಿಗಿತ್ತು. 'ಏನಾದರೂ ಮಾಡಿಕೊಂಡು ಹಾಳಾಗಿ ಹೋಗಲಿ, ತಿನ್ನುವುದಾದರೂ ಎಷ್ಟು ಹಸುಗಳನ್ನು ತಿಂದೀತು? ಒಂದನ್ನು ಮಾತ್ರ ಅಲ್ಲವೆ? ಅಷ್ಟಕ್ಕೂ ಪುಣ್ಯಕೋಟಿಯಂಥ ದೊಡ್ಡ ಆಕಳನ್ನು ಎದುರಿಸಿ ತಿನ್ನುವ ತಾಕತ್ತು ಈ ಹುಲಿಮರಿಗಾದರೂ ಎಲ್ಲಿದೆ? ಬಹಳೆಂದರೆ ಒಂದು ಕರುವನ್ನು ಕೊಲ್ಲಬಹುದು ಅಷ್ಟೇ. ಹೋದರೆ ಹೋಗಲಿ...' ಎಂದು ಮನಸ್ಸಿನಲ್ಲೇ ಗೇಣಿಸಿಕೊಂಡು, "ಆಂ... ನೋಡು... ನೀನು ಆ ಕಡೆ ದೂರ ಹೋಗು, ನಾನು ಬಾಗಿಲನ್ನು ತೆಗೆದ ಮೇಲೆ ಇತ್ತ ಬಾ...'' ಎಂದ, ಹೆದರುತ್ತ.